ಅಧ್ಯಕ್ಷರು : ಸಾಕು ಬಿಡಿ, ಅವರ ಮೇಲೆ ಉಪ ಪ್ರಶ್ನೆ ಬೇಡ.

ಶ್ರೀ ಅರಗ ಜ್ಞಾನೇಂದ್ರ : ನೀರಿನ ಅಭಾವ ಇದೆ. ಒಂದು ವರ್ಷದಿಂದ ಕೆಲಸಮಾಡದೇ ಇದ್ದವರು ಯಾವಾಗ ಮಾಡುತ್ತಾರೆ. ನಾನು ಮೊನ್ನೆ ಹೋಗಿದ್ದೇನೆ ಊರಿಗೆ, ನಿನ್ನೆ ಬೆಳಿಗ್ಗೆ ಟೆಲಿಫೋನ್ ಮಾಡಿದ್ದೇನೆ. ಯಾವಾಗ ಪ್ರಾರಂಭ ಮಾಡುತ್ತಾರೆ?

ಅಧ್ಯಕ್ಷರು : ಅದಕ್ಕೆ ಕ್ರಮ ತೆಗೆದುಕೊಳ್ಳುತ್ತಾರೆ. ಇನ್ನು ಎರಡು ವಾರದಲ್ಲಿ ಚಾಲು ಮಾಡುತ್ತೇವೆಂದು ಹೇಳಿದ್ದಾರೆ. ನೀರು ಸಿಗುತ್ತೋ ಇಲ್ಲವೋ ನೋಡಿ. ನೀವೂ ಪಾರ್ಲಿಮೆಂಟ್ ಚುನಾವಣೆಯೆಲ್ಲಾ ಮುಗಿಸಿ ಬರುತ್ತೀರಲ್ಲಾ ಆವಾಗ ಹೇಳಿ ಕ್ರಮ ತೆಗೆದುಕೊಳ್ಳೋಣ.

ಶ್ರೀ ಅರಗ ಜ್ಞಾನೇಂದ್ರ : ನಾನು ಲೋಕಸಭಾ ಎಲೆಕ್ಷನ್‌ಗೆ ಹೋಗುವ ಹಾಗೆ ಇಲ್ಲ. ಮುಗಿಸುವುದು ಹೇಗೆ? ನಾನು ನಿಮ್ಮ ಜೊತೆಯೇ ಇರಬೇಕಾಗುತ್ತದೆ.

ಅಧ್ಯಕ್ಷರು : ಹಾಗೆಲ್ಲಾ ಹೇಳಿದರೆ ನಿಮ್ಮ ನಾಯಕರು ಆಮೇಲೆ ನಮ್ಮ ಮೇಲೆ ಕೋಪ ಮಾಡಿಕೊಳ್ಳಬಹುದು.

ಶಿಗ್ಗಾಂವ, ಸವಣೂರು ಹಾಗೂ ಬಂಕಾಪುರ ಪಟ್ಟಣಗಳಿಗೆ ಕುಡಿಯುವ ನೀರಿನ ಯೋಜನೆ.

95 - ಶ್ರೀ ಮಂಜುನಾಥ ಸಿ. ಕುನ್ನೂರು (ಶಿಗ್ಗಾಂವ್) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ, ಸವಣೂರು ಹಾಗೂ ಬಂಕಾಪುರ ಪಟ್ಟಣಗಳಿಗೆ ವರದಾ ನದಿಯಿಂದ ಕುಡಿಯುವ ನೀರಿನ ಯೋಜನೆ ಎಂದು ಮಂಜೂರಾಯಿತು?

ಆ) ಈ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕಾಮಗಾರಿಗಳು ಯಾವುವು?

ಇ) ಈ ಯೋಜನೆಯಲ್ಲಿ ಬಂಕಾಪುರ ಗ್ರಾಮವನ್ನು ಕೈಬಿಡಲಾಗಿದೆಯೇ ಹಾಗಿದ್ದಲ್ಲಿ ಅದನ್ನು ಕೂಡ ಸದರಿ ಯೋಜನೆಯಡಿಯಲ್ಲಿ ಸೇರಿಸಲಾಗುವುದೇ?

ಈ) ಸದರಿ ಯೋಜನೆಗೆ ಸಂಬಂಧಿಸಿದ ಜಲ ವಿದ್ಯುತಗಾರ ಹಾಗೂ ಪೈಪಲೈನಗಳ ಕೆಲಸ ಕೂಡಲೇ ಪ್ರಾರಂಭಿಸಲಾಗುವುದೇ?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) 9.10.91ರಲ್ಲಿ ಮಂಜೂರಾಗಿದೆ.

ಆ) ಬೇಸಿಗೆ ಅವಧಿ ಜಲಶೇಖರಣೆಯ ಕೆರೆಯ ಸಾಮರ್ಥ್ಯ ಹೆಚ್ಚಿಸುವ ಮತ್ತು ಕೆರೆಯನ್ನು ಬಲಪಡಿಸುವ ಕೆಲಸವನ್ನು ಪೂರ್ತಿ ಮಾಡಲಾಗಿದೆ.

ಇ) ಈ ಯೋಜನೆಯಲ್ಲಿ ಬಂಕಾಪುರ ಗ್ರಾಮವನ್ನು ಕೈಬಿಡಬೇಕೆಂದು ತೀರ್ಮಾನಿಸಲಾಗಿತ್ತು.

ಆದರೆ ಇತ್ತೀಚಿನ ಸರ್ಕಾರದ ನೀತಿಯಂತೆ ಮೇಲಿನ ಪಟ್ಟಣವನ್ನು ಮತ್ತು ಮಾರ್ಗದಲ್ಲಿ ಬರುವ ಹಳ್ಳಿಗಳನ್ನು ಕೂಡಿಸಿ ಯೋಜನೆಯನ್ನು ಮಾರ್ಪಡಿಸಲಾಗುತ್ತಿದೆ.

ಈ) ಮಾರ್ಗದ ಹಳ್ಳಿಗಳನ್ನು ಈ ಯೋಜನೆಯಲ್ಲಿ ಸೇರಿಸಿ ಪರಿಷ್ಕೃತ ಯೋಜನೆ ಸ್ವೀಕೃತವಾದ ಕೂಡಲೇ ಅದನ್ನು ಪರಿಶೀಲಿಸಿ ಆಡಳಿತಾತ್ಮಕ ಮಂಜೂರಾತಿ ನೀಡಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಮಂಜುನಾಥ್ ಸಿ. ಕುನ್ನೂರ್ : ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ಶಿಗ್ಗಾಂವ್ ಸವಣೂರು ಹಾಗೂ ಬಂಕಾಪುರ ಪಟ್ಟಣಗಳಿಗೆ ವರದಾ ನದಿಯಿಂದ ಕುಡಿಯುವ ನೀರಿನ ಯೋಜನೆ ಎಂದು ಮಂಜೂರಾಯಿತು ಎಂಬ ಪ್ರಶ್ನೆಗೆ9.10.91ರಲ್ಲಿ ಎಂದು ಉತ್ತರ ನೀಡಲಾಗಿದೆ. ಮತ್ತು ಸರ್ಕಾರದವರು ಈ ಬಗ್ಗೆ ತೆಗೆದುಕೊಂಡ ಕ್ರಮ ಎಂದರೆ ಬೇಸಿಗೆ ಅವಧಿ ಜಲ ಶೇಖರಣೆ, ಕೆರೆಯ ಸಾಮರ್ಥ್ಯವನ್ನು ಹೆಚ್ಚಿಸುವ ಮತ್ತು ಕೆರೆಯನ್ನು ಬಲಪಡಿಸುವ ಕೆಲಸವನ್ನು ಪೂರ್ತಿ ಮಾಡಲಾಗಿದೆ ಎಂಬ ಉತ್ತರ ಇದೆ. ಆದರೆ ಆ ಕೆರೆಯನ್ನು ಬಲಪಡಿಸತಕ್ಕಂತಹ ಕೆಲಸ ಇನ್ನೂ ಅಲ್ಲಿ ಪೂರ್ತಿಯಾಗಿಲ್ಲ. ಕೊಡಿ ಕೆಲಸ ಕೂಡ ಇನ್ನೂ ಹಾಗೆಯೇ ಉಳಿದಿದೆ. ತಾವು ಉತ್ತರದಲ್ಲಿ ಪೂರ್ತಿಯಾಗಿದೆ ಎಂದು ತಪ್ಪು ಮಾಹಿತಿಯನ್ನು ಕೊಟ್ಟಿದ್ದೀರಿ. ಕಾರಣ ಅದನ್ನು ಪೂರ್ತಿ ಮಾಡತಕ್ಕಂಥ ಕೆಲಸವನ್ನು ತಾವು ಮಾಡಬೇಕು. ಅದರ ಜೊತೆಗೆ ಈ ಬಂಕಾಪುರ ಗ್ರಾಮವನ್ನು ಕೈ ಬಿಡಲಾಗಿದ್ದು ಇನ್ನುಳಿದ ಪೈಪ್‌ಲೈನ್, ಹಾಗೂ ಈ ಜಲ ವಿದ್ಯುತಗಾರರ ಕೆಲಸವನ್ನು ಮಾಡಬೇಕೆಂದು ಕೇಳಲಾಗಿದೆ. ತಾವು 1991ನೆಯ ಇಸವಿಯಲ್ಲಿ ಆಡಳಿತಾತ್ಮಕ ಮಂಜೂರಾತಿ ಮೂರು ಪಟ್ಟಣಗಳಿಗೆ ಕೂಡ ಆಗಿತ್ತು. ಮತ್ತೆ ಪುನಃ ಅದನ್ನು ತಾರೇ ಸರ್ಕಾರದಿಂದ ಕೈಬಿಟ್ಟು ಪುನಃ ಈಗ ಕೈಗೆ ತೆಗೆದುಕೊಳ್ಳುತ್ತೇವೆ ಎಂದು ಉತ್ತರ ಕೊಟ್ಟಿದ್ದು ಈ ಬಂಕಾಪುರವನ್ನು ಸೇರಿಸುತ್ತೇವೆಂದು ಹೇಳಿದ್ದು ತುಂಬಾ ಸಂತೋಷ. ಆದರೆ ಈ ಪರಿಷ್ಕೃತ ಯೋಜನೆಯನ್ನು ಕೂಡಲೇ ತಾವು ಮಂಜೂರಾತಿ ಪಡೆದು ಈ ಕೆಲಸವನ್ನು ಮಾಡಿಕೊಡಬೇಕೆಂದು ತಮ್ಮ ಮುಖೇಣ ಕೇಳುತ್ತೇನೆ.

ಶ್ರೀ ವೈಜನಾಥ ಪಾಟೀಲ್ : ಅಧ್ಯಕ್ಷರೆ, ಈಗ ಬಂಕಾಪುರವನ್ನು ಸೇರಿಸಲಾಗಿದೆ. ಆರ್‌ಡಿಪಿಆರ್ ಅವರ ಜೊತೆ ಮಾತನಾಡಬೇಕು, ಅವರೂ ಕೂಡ ಹಣ ಕೊಡಬೇಕು. ಅವರ ಜೊತೆ ಚರ್ಚಿಸಿ ಇದರ ಬಗ್ಗೆ ಆದಷ್ಟು ಬೇಗ ಆಡಳಿತಾತ್ಮಕ ಮಂಜೂರಿ ಕೊಡಲು ಕ್ರಮ ತೆಗೆದುಕೊಳ್ಳುತ್ತೇನೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಮಂಜುನಾಥ್ ಸಿ. ಕುನ್ನೂರು : ಕೆರೆ ಕೆಲಸ ಮುಗಿದಿದೆ ಎಂದು ಉತ್ತರ ಕೊಟ್ಟಿದ್ದೀರಿ. ಆದರೆ ವಸ್ತುಸ್ಥಿತಿ ಬೇರೆ. ಸುಮಾರು ಐದು ಕೋಟಿ ರೂಪಾಯಿ ತಾವು ಖರ್ಚು ಮಾಡಿದ್ದೀರಿ. ಐದು ವರ್ಷ ಆಯಿತು. ಆಗಲೇ ಎಂಟು ಕೋಟಿ ರೂಪಾಯಿ ಇತ್ತು. ಈಗ ಪರಿಷತ ಯೋಜನೆಗೆ 18 ಕೋಟಿ ರೂಪಾಯಿ ಆಗುತ್ತದೆಯೋ 28 ಕೋಟಿ ರೂಪಾಯಿ ಆಗುತ್ತದೆಯೋ ಗೊತ್ತಿಲ್ಲ.

ಅಧ್ಯಕ್ಷರು : ಈ ಸಲ ಅವರು ಟೂರ್ ಹಾಕಿಕೊಳ್ಳುತ್ತಾರೆ. ನಿಮ್ಮ ಕ್ಷೇತ್ರಕ್ಕೆ ಒಂದು ಕಾರ್ಯಕ್ರಮ

ಹಾಕಿಸಿ. ಅಲ್ಲಿ ಬಂದು ನೋಡಿ ಆದ ಮೇಲೆ ನೀವು ಅವರೂ ಇಬ್ಬರೂ ಜೊತೆಗೆ ಇನ್ಸ್‌ಪೆಕ್ಷನ್ ಮಾಡಿ ಡಿಸಿಷನ್ ತೆಗೆದುಕೊಳ್ಳಿ. ಆಯಿತಲ್ಲಾ ಮತ್ತೇನು ವಿಚಾರ.

ಶ್ರೀ ಮಂಜುನಾಥ್ ಸಿ. ಕುನ್ನೂರು : ಒಂದು ವಿಚಾರ ನಾನು ಮುಖ್ಯವಾಗಿ ಪ್ರಸ್ತಾಪ ಮಾಡಲು ಇಚ್ಛಿಪಡುತ್ತೇನೆ. ಈ ನಗರ ಪಟ್ಟಣಗಳಲ್ಲಿ ಎಲ್ಲಿ ಅವರು ಈ ಇಲಾಖೆಯಿಂದ ಕೆಲಸ ಮಾಡುತ್ತಿದ್ದಾರೆ; ಅವರು ಮುಖ್ಯವಾಗಿ ಏನು ಕೆಲಸ ಮಾಡುತ್ತಾರೆ ಎಂದರೆ ಅವರು ಬರೀ ಕೆರೆ ಹಾಳು ಮಾಡುವುದೊಂದೇ ಕೆಲಸ ಮಾಡುತ್ತಿದ್ದಾರೆ. ಆದರೆ ಅದಕ್ಕಾಗಿ ನೀವು ಐದಾರು ಕೋಟಿ ರೂಪಾಯಿ ಖರ್ಚು ಮಾಡುತ್ತೀರಿ. ಈ ಪೈಪಲೈನ್ ಮತ್ತು ಸಣ್ಣ ಸಣ್ಣ ಜಲವಿದ್ಯುತ್ ಗಾರಕ ಇತ್ಯಾದಿ ಕೆಲಸಗಳಿಗೆ 70-80 ಲಕ್ಷ ರೂಪಾಯಿ ಬೇಕಾದಾಗ ಇವನ್ನು ಇಟ್ಟುಕೊಂಡು ಸುಮ್ಮನೆ ಐದೈದು ವರ್ಷ, ಹತ್ತತ್ತು ವರ್ಷ ಈ ಯೋಜನೆಗಳನ್ನು ನನಗೆ ಅನಿಸುತ್ತದೆ.

ಅಧ್ಯಕ್ಷರು : ಕ್ವೊಶ್ಚನ್ ಅವರ್ ಟೈಮ್ ಹೋಗಿ ಬಿಡುತ್ತದೆ.

ಶ್ರೀಮಂಜನಾಥ್ ಸಿ. ಕುನ್ನೂರು : ಈ ಕೆಲಸಗಳು ನಮ್ಮ ರಾಜ್ಯದಲ್ಲಿ ಏನ ಇದ್ದಾರೆ ಆದ್ಯತೆಯ ಮೇಲೆ ಮಾಡಬೇಕೆಂದು ತಮ್ಮ ಮುಖೇನ ಕೇಳುತ್ತಿದ್ದೇನೆ.

ಅಧ್ಯಕ್ಷರು : ನೀವು ಟೂರ್ ಹೋದಾಗ ಅವೆಲ್ಲಾ ಸಜೆಷನ್ ಕೊ , ಅವರು ಒಳ್ಳೆಯ ಮನುಷ್ಯರು.

ಮೈಸೂರಿನಲ್ಲಿರುವ ರೇಷ್ಮೆ ಗೂಡು ಮಾರುಕಟ್ಟೆ ಬಗ್ಗೆ.

96 - ಶ್ರೀ ಎಸ್. ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ರೇಷ್ಮೆ ಕೃಷಿ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಮೈಸೂರು ಬಿತ್ತನೆ ವಲಯದಲ್ಲಿ ಇರುವ ರೇಷ್ಮೆ ಮಾರುಕಟ್ಟೆಗಳ ಸಂಖ್ಯೆ ಎಷ್ಟು?

2) ಪ್ರತಿಯೊಂದು ಮಾರುಕಟ್ಟೆಗೂ ದಿನವೊಂದಕ್ಕೆ ಬರುತ್ತಿರುವ ಸರಾಸರಿ ಗೂಡು ಎಷ್ಟು?

ಶ್ರೀ ಡಿ. ನಾಗರಾಜಯ್ಯ (ರೇಷ್ಮೆ ರಾಜ್ಯ ಸಚಿವರು) :

1) 8 (ಎಂಟು)

2) 0.750 ಟನಗಳು.

6.000 ಟನ್‌ಗಳು ಎಲ್ಲಾ ಮಾರುಕಟ್ಟೆಗಳು ಸೇರಿ.

ಶ್ರೀ ಟಿ.ಬಿ. ಜಯಚಂದ್ರ : (ಶ್ರೀ ಎಸ್. ಪಿ. ಮುದ್ದಹನುಮೇಗೌಡ ಅವರ ಪರವಾಗಿ) ಮಾನ್ಯ ಅಧ್ಯಕ್ಷರೆ, ಮೈಸೂರು ಬಿತ್ತನೆ ವಲಯದಲ್ಲಿ ಎಂಟು ಮಾರುಕಟ್ಟೆಗಳು ಇವೆ. ಸುಮಾರು 750 ಟನಗಳು ಸರಾಸರಿ ಒಂದು ವರ್ಷಕ್ಕೆ ಗೂಡು ಬರುತ್ತದೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಈ ಉತ್ತರದಿಂದ ನಮಗೆ ತೃಪ್ತಿ ಆಯಿತು. ಈಗ ನಮಗೆ ಬಹಳ ಪ್ರಾಮುಖ್ಯವಾಗಿ ಕೇಳಬೇಕಾಗಿರತಕ್ಕ ಪ್ರಶ್ನೆ ಅಂದರೆ